**ಓ.ಎಸ್. ನಂ. 42/2019** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 1.6.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ಪರ ಶ್ರೀಮತಿ ಎನ್.ಎಸ್. ವಕೀಲರಿಂದಃ</u>

ನಾನು ಕೋಡಿಚಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 17 ರ 5 ಎಕರೆ ಆಸ್ತಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತೇನೆ. 5 ಎಕರೆಗೆ ಸಂಬಂಧಪಟ್ಟಂತೆ ಚಕ್ಕುಬಂಧಿಯನ್ನು ದಾವೆಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ಆಸ್ತಿ ಮೂಲತಃ ಚನ್ನೇಗೌಡರ ಆಸ್ತಿಯಾಗಿದ್ದು, ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು 6 ನೇ ಐಟಂ ಆಸ್ತಿಗೆ ಸಂಬಂಧಿಸಿದಂತೆ ಪಹಣಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 17 ರಲ್ಲಿ 2-20 ಎಕರೆಯನ್ನು ಮಾತ್ರ ಚನ್ನೇಗೌಡರು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ 5 ಎಕರೆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎನ್ನುವರು. ಸರ್ವೆ ನಂಬರ್ 17 ರ ಆಸ್ತಿಗೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ಓ.ಎಸ್ 25/2016 ರ ದಾವೆ ತನಿಖೆಗೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆ ಅಂದರೆ ಕಲ್ಯಾಣೇಗೌಡ 1 ನೇ ಪ್ರತಿವಾದಿ ಎಂದರೆ ಸರಿ. ಆ ರೀತಿ ದಾವೆ ಹಾಕಿರುವ ವಿಚಾರವನ್ನು ಈ ದಾವೆಯಲ್ಲಿ ಹೇಳಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಈ ದಾವೆಯನ್ನು ದಾಖಲಿಸಿದ ಸದರಿ ದಾವೆಯ ನೋಟಿಸ್ ಬಂದಿರುತ್ತದೆ ಎನ್ನುವರು.

ನಾನು ಕೋಡಿ ಚಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 8 ಕ್ಕೆ ಸಂಬಂಧಿಸಿದಂತೆ 2 ಎಕರೆ ಆಸ್ತಿಗೆ ಈ ದಾವೆ ಸಲ್ಲಿಸಿರುತ್ತೇನೆ. 2 ಎಕರೆ ಆಸ್ತಿಗೆ ಸಂಬಂಧಿಸಿದಂತೆ ಚಕ್ಕುಬಂಧಿಯನ್ನು ನೀಡಿರುತ್ತೇನೆ. ದಾವಾ 7 ನೇ ಐಟಂಗೆ ಸಂಬಂಧಿಸಿದಂತೆ ನನ್ನ ತಾತ 1994-95 ರಲ್ಲಿ ಅವರ ಮಕ್ಕಳ ಹೆಸರಿನಲ್ಲಿ ಜಮೀನು ಮಂಜೂರಾತಿಗೆ ಅರ್ಜಿ ಸಲ್ಲಿಸಿದ್ದರು. ನನ್ನ ತಾತ ಅವರ ಮಕ್ಕಳ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಆದರೆ ಯಾವ ದಾಖಲೆ ಎಂದು ಈಗ ಹೇಳಲು ಸಾಧ್ಯವಿಲ್ಲ. 1994-95 ರಲ್ಲಿ ಒಟ್ಟು ಕುಟುಂಬದಲ್ಲಿ ಯಾರೆಲ್ಲ ವಾಸವಾಗಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಚನ್ನೇಗೌಡರ ಕುಟುಂಬಕ್ಕೆ ಆದಾಯದ ಮೂಲ ಏನು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿದಾರರು ವ್ಯವಸಾಯದ ಮೂಲ ಇತ್ತು ಎನ್ನುವರು. ಎಷ್ಟು ಆದಾಯ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಒಟ್ಟು ಕುಟುಂಬದ ಆದಾಯ ಮತ್ತು ವ್ಯಯದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಐಟಂ 7 ನೇ ಆಸ್ತಿಯಲ್ಲಿ ಗಿಡಗಂಟೆಗಳನ್ನು ತೆಗೆದು ಅದನ್ನು ವ್ಯವಸಾಯ ಭೂಮಿಯನ್ನಾಗಿ ಮಾಡಲು ಎಷ್ಟು ಖರ್ಚಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾಐಟಂ 7 ಆಸ್ತಿಯನ್ನು ಮಂಜೂರು ಮಾಡುವಾಗ ಅದಕ್ಕೆ ಸರ್ಕಾರದವರು ಎಷ್ಟು ಕಿಮ್ಮತ್ತನ್ನು ಕಟ್ಟಿಸಿಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಅಂದಾಜು 6 ಸಾವಿರ ಕಟ್ಟಿಸಿಕೊಂಡಿರುತ್ತಾರೆ ಎನ್ನುವರು. ದಾವಾಐಟಂ 7 ಆಸ್ತಿಯ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ, ಅದು 1 ಮತ್ತು 2 ನೇ ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ದಾವಾಐಟಂ 7 ಆಸ್ತಿಯಲ್ಲಿ ಕಾಣಿಸಿರುವ 2 ಎಕರೆಯಲ್ಲಿ ಸರ್ವೆ ನಂಬರ್ 8/1 ರಲ್ಲಿ 1 ಎಕರೆ ಮತ್ತು 8/2 ರಲ್ಲಿ 1 ಎಕರೆ ಎಂದರೆ ಸಾಕ್ಷಿದಾರರು ಒಂದೇ ಸರ್ವೆ ನಂಬರ್ 8 ಆಗಿರುತ್ತದೆ ಎನ್ನುವರು. 2 ನೇ ಪ್ರತಿವಾದಿಯು ಸರ್ವೆ ನಂಬರ್ 8/1 ರಲ್ಲಿ 1 ಎಕರೆ ಆಸ್ತಿಯನ್ನು ಮಂಜೂರು ಮಾಡಲು ಅಕ್ರಮ ಸಕ್ರಮ ಸಮಿತಿಯ ಮುಂದೆ ಅರ್ಜಿ ಸಲ್ಲಿಸಿದ್ದು ಅದು ಅವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿ ಅದು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎನ್ನುವರು. 2 ನೇ ಪ್ರತಿವಾದಿಯು ಅರ್ಜಿ ನೀಡಿದ ನಂತರ ಸಮಿತಿಯವರು ವಿಚಾರಣೆ ಮಾಡಿ 2 ನೇ ಪ್ರತಿವಾದಿ ಸದರಿ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ಅವರಿಗೆ ಸಾಗುವಳಿ ಪತ್ರವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರು ಸ್ವಾಧೀನದಲ್ಲಿರುತ್ತಾರೆ ಎನ್ನುವರು. 2 ನೇ ಪ್ರತಿವಾದಿಗೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಕಿಮ್ಮತ್ತನ್ನು ಕಟ್ಟಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 8/2 ರಲ್ಲಿ 1 ಎಕರೆಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ಅಕ್ರಮ ಸಕ್ರಮ ಸಮಿತಿಯ ಮುಂದೆ ಅರ್ಜಿ ಸಲ್ಲಿಸಿದ್ದು, ಅದು ಅವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿ ನನ್ನ ತಾತ ಅವರ ಮಕ್ಕಳ ಹೆಸರಿಗೆ ಅರ್ಜಿ ಸಲ್ಲಿಸಿದ್ದು, ಮಂಜೂರಾಗಿರುತ್ತದೆ ಎನ್ನುವರು. ಸದರಿ ಆಸ್ತಿಗೆ 1 ನೇ ಪ್ರತಿವಾದಿಯೇ ಕಿಮ್ಮತ್ತನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ತಾತ 1 ನೇ ಪ್ರತಿವಾದಿಯ ಮೂಲಕ ಕಟ್ಟಿಸಿರುತ್ತಾರೆ ಎನ್ನುವರು. ನನ್ನ ತಾತ ಅಥವಾ ನನ್ನ ತಂದೆ ಅಕ್ರಮ ಸಕ್ರಮ ಸಮಿತಿಯ ಮುಂದೆ ಸದರಿ ಆಸ್ತಿ ಒಟ್ಟು ಕುಟುಂಬದ ಆಸ್ತಿ, ಕುಟುಂಬದ ಪರವಾಗಿ ಜಂಟಿಯಾಗಿ ಮಂಜೂರು ಮಾಡಿ ಎಂದು ತಕರಾರು ಸಲ್ಲಿಸಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಮಂಜೂರಾದ ನಂತರ ಅವರ ಹೆಸರಿಗೆ ಖಾತೆ ಮಾಡಬಾರದು ಎಂದು, ಒಟ್ಟು ಕುಟುಂಬದ ಆಸ್ತಿ ಎಂದು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ಅವರಿಗೆ ಮಂಜೂರಾದ ತಲಾ 1 ಎಕರೆ ಆಸ್ತಿಯ ಮೇಲೆ ಹೆಚ್.ಡಿ.ಕೋಟೆಯ ಪಿ.ಎಲ್.ಡಿ ಬ್ಯಾಂಕಿನಲ್ಲಿ ಸಾಲ ಪಡೆದಿದ್ದು, ಅದು ಪಹಣಿಯಲ್ಲಿ ನಮೂದಾಗಿರುತ್ತದೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದಂತೆ ಮೋಸ ಮಾಡಿ ಸಾಲ ಪಡೆದಿರುತ್ತಾರೆ ಎನ್ನುವರು. ಸದರಿ ಬ್ಯಾಂಕಿಗೆ ಸಾಲ ನೀಡಬೇಡಿ, ಒಟ್ಟು ಕುಟುಂಬದ ಆಸ್ತಿ ಎಂದು ಯಾವುದೇ ಅರ್ಜಿ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂಬರ್ 8/2 ರಲ್ಲಿ 1 ನೇ ಪ್ರತಿವಾದಿ ಒಂದು ಕೊಳವೆ ಬಾವಿ ಹಾಕಿಸಿರುತ್ತಾರೆ ಎಂದರೆ ಸಾಕ್ಷಿ ಎಲ್ಲರೂ ಸೇರಿ ಹಾಕಿಸಿರುತ್ತೇವೆ ಎನ್ನುವರು. ನಾನು ಬೋರವೆಲ್ ಕೊರೆಸಲು ಹಣ ನೀಡಿರುವ ಬಗ್ಗೆ ಯಾವುದೇ ರಶೀದಿ ಇರುವುದಿಲ್ಲ. ಸರ್ವೆ ನಂಬರ್ 8/1 ಮತ್ತು 8/2 ಆಸ್ತಿಯು 1 ಮತ್ತು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಅದರ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ 8 ಆಸ್ತಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸಾಕ್ಷಿದಾರರು ಮುಂದುವರಿದು ಫಾರಂ5 ಮತ್ತು 6 ನ್ನು ನೀಡಿರುತ್ತೇನೆ ಎನ್ನುವರು. ಪಹಣಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 8 ಆಸ್ತಿಯು 1 ರಿಂದ 6, 11 ಮತ್ತು 12 ನೇ ಪ್ರತಿವಾದಿಗೆ ಸೇರಿರುವ ಆಸ್ತಿಯಾಗಿದ್ದು, ದಾಖಲಾತಿ ದುರಸ್ತಿಯಾಗದ ಕಾರಣ ಅವರ ಹೆಸರಿಗೆ ಖಾತೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ 9 ನೇ ಆಸ್ತಿಗೆ ಸಂಬಂಧಿಸಿದಂತೆ ನಿಪಿ16 ನ್ನು ಹಾಜರುಪಡಿಸಿರುತ್ತೇನೆ. ನಿಪಿ16 ರಲ್ಲಿ ವಿಸ್ತೀರ್ಣ ಮತ್ತು ಚಕ್ಕುಬಂಧಿ ಇರುವುದಿಲ್ಲ ಎಂದರೆ ಸರಿ. ನಿಪಿ16 ರಲ್ಲಿ ವಿಸ್ತೀರ್ಣ ಮತ್ತು ಚಕ್ಕುಬಂಧಿ ಇಲ್ಲದಿರುವುದರಿಂದ ದಾವಾ ಐಟಂ 9 ಆಸ್ತಿಯಲ್ಲಿ ಭಾಗ ಕೇಳುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ 3 ನೇ ಆಸ್ತಿಯಲ್ಲಿ ಎಷ್ಟು ಮನೆಗಳು ಇರುತ್ತದೆ ಮತ್ತು ಅದರ ವಿಸ್ತೀರ್ಣವನ್ನು ದಾವಾಪತ್ರದಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ 5 ಮನೆಗಳು ಇರುವ ಬಗ್ಗೆ ಹೇಳಿರುತ್ತೇನೆ, ವಿಸ್ತೀರ್ಣ ಹೇಳಿರುವುದಿಲ್ಲ ಎನ್ನುವರು. 5 ಮನೆಗಳು ಇರುವ ಬಗ್ಗೆ ದಾವಪತ್ರದಲ್ಲಿ ಹೇಳಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 5 ಮನೆಗಳಿಗೆ ಸಂಬಂಧಪಟ್ಟ ವಿದ್ಯುತ್ ಬಿಲ್ ಮತ್ತು ನೀರಿನ ಬಿಲ್ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಾತ ಬದುಕಿದ್ದಾಗಲೇ ನನ್ನ ತಂದೆ ಮತ್ತು ಅವರ ಸಹೋದರರಿಗೆ ಭಾಗ ಕೊಟ್ಟಿರುವುದರಿಂದ ದಾವಾಆಸ್ತಿಗಳಲ್ಲಿ ನನಗೆ ಭಾಗ ಕೇಳುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತನವರ ಕುಟುಂಬದಲ್ಲಿ ವಿಭಾಗವಾದ ನಂತರ 1 ಮತ್ತು 2 ನೇ ಪ್ರತಿವಾದಿಯರು ಅವರು ಸ್ವಯಾರ್ಜಿತವಾಗಿ ಗಳಿಸಿರುವ ಆಸ್ತಿಯನ್ನು ಕಬಳಿಸಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯು ಸರ್ವೆ ನಂಬರ್ 8/1 ರ 1 ಎಕರೆ ಆಸ್ತಿಯನ್ನು 1 ನೇ ಪ್ರತಿವಾದಿ ಹೆಂಡತಿಗೆ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಮೋಸದಿಂದ ಕರಾರುಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎನ್ನುವರು. ಸರ್ವೆ ನಂಬರ್ 8/1 ರ ಆಸ್ತಿಯ ದಾಖಲಾತಿಯು ದುರಸ್ತಿಯಾಗದೇ ಇರುವುದರಿಂದ 1 ನೇ ಪ್ರತಿವಾದಿಯ ಹೆಂಡತಿಗೆ ಕ್ರಯಪತ್ರವಾಗಿರುವುದಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ದಾವೆ ಬಾಕಿ ಇದ್ದಾಗಲೂ ಸಹ ಮೋಸದಿಂದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎನ್ನುವರು. ದಾವೆ ನ್ಯಾಯಾಲಯದಲ್ಲಿ ಬಾಕಿ ಇರುವಾಗ ಮೋಸದಿಂದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದು ನ್ಯಾಯಾಲಯಕ್ಕೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ.

4 ರಿಂದ 6 ನೇ ಪ್ರತಿವಾದಿಯ ತಂದೆಯಾದ ರಾಮಚಂದ್ರ ರವರು ಅವರ ಪಾಲಿಗೆ ಬಂದ 1 ನೇ ಐಟಂ ಆಸ್ತಿಯ ಪೈಕಿ 20 ಗುಂಟೆ ಜಮೀನನ್ನು 1 ನೇ ಪ್ರತಿವಾದಿಯ ಹೆಂಡತಿಗೆ ಅವರು ಬದುಕಿದ್ದಾಗಲೇ ಕರಾರುಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಕುಟುಂಬದ ಸದಸ್ಯರಿಗೆ ಗೊತ್ತಿಲ್ಲದಂತೆ ಮೋಸದಿಂದ ಕರಾರುಪತ್ರ ಮಾಡಿಕೊಟ್ಟಿರುತ್ತಾರೆ ಎನ್ನುವರು. 2 ನೇ ಪ್ರತಿವಾದಿಯು ತನಗೆ ಸಂಬಂಧಪಟ್ಟ ಸರ್ವೆ ನಂಬರ್ 8/1 ರ 1 ಎಕರೆ ಆಸ್ತಿಯ ದಾಖಲಾತಿಯು ದುರಸ್ತಿಯಾಗದ ಕಾರಣ 1 ಮತ್ತು 2 ನೇ ಪ್ರತಿವಾದಿಯು ಪರಸ್ಪರ ಸಹೋದರರಾಗಿದ್ದರಿಂದ ಸದರಿ 1 ಎಕರೆ ಆಸ್ತಿಗೆ ಸಂಬಂಧಪಟ್ಟಂತೆ 2 ನೇ ಪ್ರತಿವಾದಿಯು 1 ನೇ ಪ್ರತಿವಾದಿ ಹೆಸರಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ದಾವೆ ತನಿಖೆಗೆ ಬಾಕಿ ಇದ್ದಾಗ ಮೋಸದಿಂದ ಮಾಡಿಕೊಂಡಿರುತ್ತಾರೆ ಎನ್ನುವರು. ಹಕ್ಕು ಖುಲಾಸೆ ಪತ್ರದ ಆಧಾರದ ಮೇಲೆ ಖಾತೆ ಮಾಡಬಾರದು ಎಂದು ನಾನು ತಕರಾರು ಸಲ್ಲಿಸಿರುವುದಿಲ್ಲ.

7 ನೇ ಐಟಂ ಆಸ್ತಿಯು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ 1 ನೇ ಪ್ರತಿವಾದಿ ಹೆಸರಿಗೆ ಹಕ್ಕು ಖುಲಾಸೆ ಪತ್ರದ ಆಧಾರದ ಮೇಲೆ ಖಾತೆ ಮಾಡಬಾರದು ಎಂದು ತಕರಾರು ತಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ತಕರಾರು ಸಲ್ಲಿಸಿರುವುದಿಲ್ಲ ಎನ್ನುವರು. 1 ನೇ ಪ್ರತಿವಾದಿಯು ಅವರಿಗೆ ಸಂಬಂಧಪಟ್ಟ ಆಸ್ತಿಯನ್ನು ಅವರ ಇಬ್ಬರು ಗಂಡು ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಅವರಿಗೆ ಸಂಬಂಧಪಟ್ಟ ಆಸ್ತಿಯನ್ನು ವಿಭಾಗ ಮಾಡುವಾಗ ಹಕ್ಕು ಖುಲಾಸೆ ಆಧಾರದ ಮೇಲೆ ಬಂದ 1 ಎಕರೆ ಆಸ್ತಿಯನ್ನು 13 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮೋಸದಿಂದ ಮಾಡಿದ್ದು, 13 ನೇ ಪ್ರತಿವಾದಿಯನ್ನು ಪಕ್ಷಗಾರರಾಗಿ ಮಾಡಿರುತ್ತೇನೆ ಎನ್ನುವರು. 13 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗುವಾಗ ಮತ್ತು ಅವರು ಬ್ಯಾಂಕಿನಿಂದ ಸಾಲ ಪಡೆಯುವಾಗ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಬದುಕಿದ್ದಾಗ ಅವರು ತಕರಾರು ಕೊಟ್ಟಿರುವುದಾಗಿ ಹೇಳುತ್ತಿದ್ದರು ಎನ್ನುವರು. ಆ ರೀತಿ ಸಲ್ಲಿಸಿರುವ ತಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುತ್ತದಾ ಎಂದರೆ ಸಾಕ್ಷಿ ಸಿಕ್ಕಿದರೆ ಹಾಜರುಪಡಿಸುತ್ತೇನೆ ಎನ್ನುವರು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.